ದಿನಾಂಕ : 24.08.2023
ಅಸಲು ದಾವೆ: 48/2015
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : 33 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಎಸ್.ಎಸ್ ರವರಿಂದ :</u>**

ಸರ್ವೆ ನಂ.391/2 ಒಟ್ಟು ವಿಸ್ತೀರ್ಣ 1 ಎಕರೆ 2 ಗುಂಟೆ. ಅದರಲ್ಲಿ 12 ಗುಂಟೆ ಖರಾಬಿಗೆ ಹೋಗಿರುತ್ತದೆ. ಬೆಂಗಳೂರು - ಮೈಸೂರು ರಸ್ತೆಗೆ ಖರಾಬು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ರಸ್ತೆ ಮಾಡಲು ಖರಾಬು ತೆಗೆದಿರುತ್ತಾರೆ ಎಂದು ಹೇಳುತ್ತಾರೆ. ಹಾಗಾಗಿ ಬರಿ 30 ಗುಂಟೆ ಜಮೀನು ವ್ಯವಸಾಯದ ಜಮೀನು ಎಂದರೆ ಸರಿ. ಡಿ ಷೆಡ್ಯೂಲ್ ಸಿ ಷೆಡ್ಯೂಲ್ ನ ಒಂದು ಭಾಗ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಡಿ ಷೆಡ್ಯೂಲ್ ನಲ್ಲಿ ಸರ್ವೆ ನಂ.391/2 ತೋರಿಸಿರುತ್ತೇನೆ. ಅದರಲ್ಲಿ 1 ರಿಂದ 6 ಷೆಡ್ಯೂಲ್ ತೋರಿಸಿರುತ್ತೇನೆ ಎಂದರೆ ಸರಿ . ಡಿ ಷೆಡ್ಯೂಲ್ ನಲ್ಲಿ 25 ಗುಂಟೆ, 3 ಗುಂಟೆ, 4 ¼ ಗುಂಟೆ, 3 ಗುಂಟೆ, 4 ¼ ಗುಂಟೆ ಮತ್ತು 5 ½ ಗುಂಟೆ ಎಂದು ತೋರಿಸಿರುತ್ತೇವೆ ಎಂದರೆ ಸರಿ, ಅದು ಒಟ್ಟು 45 ಗುಂಟೆ ತೋರಿಸಿರುತ್ತದೆ ಎಂದರೆ ಸರಿ. 33 ನೇ ಪ್ರತಿವಾದಿ 5 ಗುಂಟೆ ಖರೀದಿ ಮಾಡಿರುತ್ತಾರೆ. ಸದರಿ 5 ಗುಂಟೆಯನ್ನು ಡಿ ಷೆಡ್ಯೂಲ್ ನಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ಕಾಣುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.391/2 ಮೂಲತಃ ಪಿತ್ರಾರ್ಜಿತ ಜಮೀನು. ಪಿತ್ರಾರ್ಜಿತ ಮತ್ತು ಸ್ವಯಾರ್ಜಿತದ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆಯ ಹೆಸರು ದ್ಯಾಪಯ್ಯ. ನನ್ನ ತಂದೆಯ ತಂದೆ ಹೆಸರು ದಾಸಶೆಟ್ಟಿ. ದಾಸಶೆಟ್ಟಿಯವರ ತಂದೆಯ ಹೆಸರು ಕೆಂಪಶೆಟ್ಟಿ. ಸರ್ವೆ ನಂ.391/2 ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಕೈ ಬರಹದ 1937-38 ರದು ಆರ್.ಟಿ.ಸಿ ನೋಡಿರುತ್ತೇನೆ. ನಾನು 1937-38 ರ ಆರ್.ಟಿ.ಸಿ ನೋಡುವಾಗ ದಾಸಶೆಟ್ಟಿ ಬಿನ್ ಮರಿಶೆಟ್ಟಿ ಎಂದು ಇತ್ತು. ಸದರಿ ಆರ್.ಟಿ.ಸಿ. ಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. 1937-38 ರಲ್ಲಿ ಕೈ ಬರಹದ ಆರ್.ಟಿ.ಸಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಪಿ ಸಿರೀಸ್ ದಾಖಲೆಗಳನ್ನು ತೋರಿಸಲಾಗಿ ನಾನು ಹೇಳಿದ 1937-38 ರ ಆರ್.ಟಿ.ಸಿ ಯಾವುದು

ಎಂದು ಕೇಳಲಾಗಿ ಸಾಕ್ಷಿಯು ದಾಖಲೆಗಳನ್ನು ನೋಡಿದ್ದು ನಿಪಿ.14 ಸದರಿ ದಾಖಲೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.14 ದಾಖಲೆ 1989 -90 ರಿಂದ 1992-93 ಆಗಿರುತ್ತದೆ ಎಂದರೆ ಸರಿ. ನಾನು ಮೇಲೆ ಹೇಳಿದ 1937-38 ರ ಆರ್.ಟಿ.ಸಿ ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.14 ರಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಬೇರೆ ಯಾವುದೇ ದಾಖಲೆ ನೋಡಿರುವುದಿಲ್ಲ. ಕೆಂಪಶೆಟ್ಟಿ ಬಿನ್ ಮರಿಶೆಟ್ಟಿ ನನ್ನ ತಾತನ 3 ನೇ ತಮ್ಮ. ನಿಪಿ.14 ದಾಸಶೆಟ್ಟಿ ಬಿನ್ ಮರಿಶೆಟ್ಟಿ ಎಂದು ಇದೆ ಎಂದರೆ ಸರಿ . ಅವರು ನಮ್ಮ ತಾತನ ತಮ್ಮನ ಮಗ ಎಂದರೆ ಸರಿ. ಸರ್ವೆ ನಂ.391/2 ಕ್ಕೆ ಸಂಬಂಧಪಟ್ಟಂತೆ ಆರ್.ಟಿ.ಸಿ ನಿಪಿ.14 ಅಲ್ಲದೆ ಫಸಲು ಪಹಣಿ ನೋಡಿರುತ್ತೇನೆ. ಪಹಣಿಯಲ್ಲಿ ದಾಸಶೆಟ್ಟಿ ಬಿನ್ ಮರಿಶೆಟ್ಟಿ ಎಂದು ನಮೂದಾಗಿರುತ್ತದೆ. ದಾಸಶೆಟ್ಟಿ ಬಿನ್ ಮರಿಶೆಟ್ಟಿ ಎಂದರೆ ನನ್ನ ತಾತನ ತಮ್ಮನ ಮಗ ಎಂದರೆ ಸರಿ. ಸರ್ವೆ ನಂ.391/2 ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

33 ನೇ ಪ್ರತಿವಾದಿ ಏನು ತಕರಾರು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸಾಕ್ಷಿಗೆ ಒಂದು ಕ್ರಯಪತ್ರದ ದೃಢೀಕೃತ ತೋರಿಸಲಾಗಿ ಸರ್ವೆ ನಂ.391/2 ರಲ್ಲಿ ಒಂದು ಎಕರೆ 1 ಗುಂಟೆಯನ್ನು ನನ್ನ ತಾತನ ತಮ್ಮನ ಮಗನಾದ ದಾಸಶೆಟ್ಟಿ ಅವರು ಬಸಮ್ಮ ಮತ್ತು ಅವರ ದತ್ತು ಮಗ ರಾಜಶೇಖರ್ ರವರಿಂದ ದಿನಾಂಕ 14.07.1949 ರಂದು ಖರೀದಿ ಮಾಡಿರುವ ಕ್ರಯಪತ್ರ ಎಂದು ಒಪ್ಪಿಕೊಂಡಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ದಾಸಶೆಟ್ಟಿ ಅವರ ಹೆಂಡತಿ ಮತ್ತು ಮಕ್ಕಳು ಪ್ರತಿವಾದಿಗಳಾದ 16 ರಿಂದ 20 ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಜಮೀನನ್ನು ಖರೀದಿ ಮಾಡಿದ ನಂತರ ದಾಸಶೆಟ್ಟಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ದಾಸಶೆಟ್ಟಿ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ದಾಸಶೆಟ್ಟಿ ಅವರು ತಮ್ಮ ಮೈನರ್ ಮಗನಾದ 20 ನೇ ಪ್ರತಿವಾದಿ ವೆಂಕಟಚಾಲ ಅವರ ಪರ ಮತ್ತು ಪ್ರತಿವಾದಿಗಳಾದ 17 ಮತ್ತು 18 ಸೇರಿಕೊಂಡು ದಿನಾಂಕ 25.04.1975 ರಲ್ಲಿ ಸದರಿ ಜಮೀನನ್ನು ಶ್ರೀನಿವಾಸರಾಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮೂಲ ಕ್ರಯಪತ್ರವನ್ನು ನಿಡಿ.2 ಎಂದು ಗುರುತಿಸಲಾಯಿತು. ಸದರಿ ಶ್ರೀನಿವಾಸರಾಯರು ಅವರ ಹೆಸರಿಗೆ 5 ಗುಂಟೆ ಖಾತೆ ಬದಲಾವಣೆ ಆಗಿ ಅವರೇ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ಸದರಿ 5 ಗುಂಟೆಯನ್ನು ದಿನಾಂಕ 25.09.1975 ರಲ್ಲಿ 33 ನೇ ಪ್ರತಿವಾದಿಗೆ ಶ್ರೀನಿವಾಸರಾಯರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮೂಲ ಕ್ರಯಪತ್ರವನ್ನು ನಿಡಿ.3 ಎಂದು ಗುರುತಿಸಲಾಯಿತು. ಸದರಿ 5 ಗುಂಟೆ ಜಮೀನು ಸ್ವಾಧೀನಾನುಭವದಲ್ಲಿ 33 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. 33 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಸಾಕ್ಷಿಯು 33 ನೇ ಪ್ರತಿವಾದಿಯ

ಹೆಸರಿನಲ್ಲಿರುವ ಆರ್.ಟಿ.ಸಿ. ಯನ್ನು ಗುರುತಿಸಿದ್ದು ಆರ್.ಟಿ.ಸಿ. ಯನ್ನು ನಿಡಿ.4 ಎಂದು ಗುರುತಿಸಲಾಯಿತು. ಶ್ರೀನಿವಾಸರಾಯರವರ ಹೆಂಡತಿ ಮಕ್ಕಳಾದ ಮುನ್ನಾಬಾಯಿ ಮತ್ತು ಅವರ ಮೈನರ್ ಮಗ ಮೂರ್ತಿರಾವ್ ಅವರು 33 ನೇ ಪ್ರತಿವಾದಿ ಪರವಾಗಿ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು.

33 ನೇ ಪ್ರತಿವಾದಿ ಸದರಿ 5 ಗುಂಟೆಯನ್ನು ಅನ್ಯಕ್ರಾಂತ ಮಾಡಿಸಿರುತ್ತಾರೆ ಎಂದರೆ ಸರಿ. ಅಲಿನೇಷನ್ ಪ್ರಕಾರ 33 ನೇ ಪ್ರತಿವಾದಿ ಹೆಸರಿಗೆ ಮದ್ದೂರು ಪುರಸಭೆಯಲ್ಲಿ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಖಾತೆ ಬದಲಾವಣೆ ದಾಖಲೆ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ನಿಡಿ.6 ಎಂದು ಗುರುತಿಸಲಾಯಿತು. 5 ಗುಂಟೆಯಲ್ಲಿ ಆರ್.ಸಿ.ಸಿ. ಕಟ್ಟಡ ಮತ್ತು ಶೀಟಿನ ಮನೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ ಕೇಸ್ ಇದ್ದಾಗ ಮೇಲುಗಡೆ 1 ನೇ ಅಂತಸ್ತನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1986 ರಲ್ಲಿ ಕೆಳಗಡೆ ಅಂಗಡಿ ಮಳಿಗೆ ಮತ್ತು ವಾಸದ ಮನೆಯನ್ನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಂಗಡಿ ಮಳಿಗೆ ಮತ್ತು ವಾಸದ ಮನೆಯಲ್ಲಿ 33 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಕೆಳಗಡೆ ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂ.391/2 ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.391/2 ರಲ್ಲಿ ನನಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 33 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.